# <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>

## <u>ಸಿ.ಸಿ. ನಂ. **57 / 2019**</u>

ಸಿಡಬ್ಲ್ಯೂ- **22**
ಪಿಡಬ್ಲ್ಯೂ-**11**

<u>ದಿನಾಂಕಃ **25.01.2025.**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

ಸಾಕ್ಷಿಯ ಹೆಸರುಃ - ದೇವರಾಜ
ತಂದೆಯ/ಗಂಡನ ಹೆಸರುಃ - ಪೀಳಪ್ಪ
ವಯಸ್ಸುಃ -? **58** ವರ್ಷ
ಉದ್ಯೋಗಃ - ಪಾಸ್ಟರ್ .
ವಾಸಸ್ಥಳಃ - ಹೊಸಳ್ಳಿ ಕ್ರಾಸ್ ಯಾದಗಿರಿ .

<u>ಮುಖ್ಯ ವಿಚಾರಣೆಃ ಹಿ.ಸ.ಸ.ಅ. ರವರಿಂದಃ</u>

ಚಾಸಾ-1,17 ರಿಂದ 21 ಮತ್ತು 23 ರವರ ಪರಿಚಯ ನನಗೆ ಇರುತ್ತದೆ. ಮೃತಪಟ್ಟ ಎಲಿಜಬೆತ್, ಸ್ಟೀಪನ್ ಮತ್ತು ಜಾನ್ ಪಾಲ್ ರವರ ಪರಿಚಯ ನನಗೆ ಇರುತ್ತದೆ. ದಿನಾಂಕಃ 31.05.2018 ರಂದು ನಾನು, ಚಾಸಾ-1,17 ರಿಂದ 21 ಮತ್ತು 23 ಮತ್ತು ಮೃತಪಟ್ಟ ಎಲಿಜಬೆತ್, ಸ್ಟೀಪನ್ ಮತ್ತು ಜಾನ್ ಪಾಲ್ ರವರು ಸೇರಿ ಪ್ರಾರ್ಥನೆ ಗೊಸ್ಕರ ಗಾಜರಕೋಟಗೆ ಕಂಮಾಂಡ ಜೀಪು ಸಂಖ್ಯೆಕೆಎ-36-1306 ನೇದ್ದರಲ್ಲಿ ಹೋಗಿದ್ದೇವು. ಸದರಿ ಜೀಪನ್ನು ಮೃತ ಬಸವರಾಜು ಚಲಾಯಿಸುತ್ತಿದ್ದನ್ನು. ಪ್ರಾರ್ಥನೆ ಮುಗಿಸಿಕೊಂಡು ಯಾದಗಿರಿ ಕಡೆಗೆ ನಾವು ಜೀಪಿನಲ್ಲಿ ಬರುತ್ತಿದ್ದಾಗ ಮುಂಡರಗಿ ಕ್ರಾಸ್ ಸಮೀಪ ಯಾದಗಿರಿಕಡೆಯಿಂದ ಒಂದು ಬೂದಿ ಗಾಡಿ ಬಂದು ನಮ್ಮ ಜೀಪಿಗೆ ಡಿಕ್ಕಿಪಡಿಸಿದ್ದು ಆವಾಗ ನಮ್ಮ ಜೀಪು ಮುಂಡರಗಿ ಕಡೆಗೆ ತಿರುಗಿ ನಿಂತಿತ್ತು. ಸದರಿ ಅಪಘಾತದಿಂದಾಗಿ ನನ್ನ ಎಡಗೈ ಹೆಬ್ಬೆರಳು ಕತ್ತರಿಸಿದ್ದು ಮತ್ತು ಎಡಭುಜಕ್ಕೆ ಭಾರಿ ಗಾಯಗಳು ಆಗಿತ್ತು ಮತ್ತು ನನ್ನ ಪಕ್ಕೆಗೆ ಭಾರಿ ಪೆಟ್ಟು ಆಗಿತ್ತು. ಸದರಿ ಅಪಘಾತದಿಂದ ನನ್ನ ಹೆಂಡತಿಯಾದ ಎಲಿಜಬೆತ್ ಮತ್ತು ಪಾಸ್ಟರ್ ಜಾನ್ ಪಾಲ್ ಮತ್ತು ಜೀಪಿನ ಚಾಲಕ ಬಸವರಾಜು ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಅದೇ ರೀತಿ ಸ್ಟೀಪನ್ ನನ್ನು ಆಸ್ಪತ್ರೆಗೆ ಕರೆದುಕೊಂಡು ಬರುವಾಗ ಆತನು ರಸ್ತೆಯ ಮಧ್ಯದಲ್ಲಿ ಮೃತಪಟ್ಟಿದ್ದನ್ನು. ಜೀಪಿನಲ್ಲಿ ಇದ್ದ ಉಳಿದವರಿಗೆ ಗಾಯಗಳು ಆಗಿದ್ದವು. ಸದರಿ ಅಪಘಾತವನ್ನು ಬೂದಿ ಟ್ಯಾಂಕರ ಚಾಲಕನು ಮಾಡಿದ್ದನ್ನು ಅದರ ನಂಬರ ನನಗೆ ಹೇಳಲು ಬರುವುದಿಲ್ಲ. ಎಲ್ಲಾ

ಗಾಯಗಳನ್ನು ತುರ್ತು ಚಿಕಿತ್ಸಾ ವಾಹನದಲ್ಲಿ ಯಾದಗಿರಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಸದರಿ ಅಪಘಾತವು ರಾತ್ರಿ 10 ಗಂಟೆಗೆ ಆಗಿತ್ತು. ಬೂದಿ ಟ್ಯಾಂಕರ ಚಾಲಕನ ಹೆಸರು ಆನಂದಪ್ಪ ಇರುತ್ತದೆ. ಅವನನ್ನು ನೋಡಿದರೆ ನನಗೆ ಗುರುತು ಹಿಡಿಯಲು ಆಗುವುದಿಲ್ಲ. ಬೂದಿ ಟ್ಯಾಂಕರ ಚಾಲಕನ ತಪ್ಪಿನಿಂದ ಅಪಘಾತ ಆಗಿರುತ್ತದೆ. ಜೀಪಿ ಮತ್ತು ಟ್ಯಾಂಕರಿನ ಪೋಟೊಗಳನ್ನು ತೋರಿಸಿದ್ದರೆ ಅವುಗಳನ್ನು ನಾನು ಗುರುತಿಸುತ್ತೇನೆ. ಸದರಿ ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 9 ರಿಂದ 12 ಎಂದು ಗುರುತಿಸಲಾಗಿರುತ್ತದೆ. ಈ ರೀತಿಯಾಗಿ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಜಿ.ಬಿ.ಅರ್.. ರವರಿಂದಃ

ನಾನು, ಚಾಸಾ-1,17 ರಿಂದ 21 ಮತ್ತು 23 ರವರ ಪರಿಚಯ ನನಗೆ ಇರುತ್ತದೆ. ಮೃತಪಟ್ಟ ಎಲಿಜಬೆತ್, ಸ್ಟೀಪನ್ ಮತ್ತು ಜಾನ್ ಪಾಲ್ ರವರು ಒಂದೇ ಜನಾಂಗದವರು ಆಗಿರುತ್ತೇವೆ ಎಂದರೆ ಸರಿ. ಸದರಿ ಜೀಪನ್ನು ಬಾಡಿಗೆಗೆ ನೇಮಿಸಿದ್ದೆ. ಸದರಿ ಜೀಪಿನ ಚಾಲಕನಾದ ಬಸವರಾಜನಿಗೆ ಚಾಲನಾ ಪರವಾನಿಗೆ ಪತ್ರ ಇದ್ದ ಬಗ್ಗೆ ಹಾಗೂ ಅದರ ವಿಮೆ ಇದ್ದ ಬಗ್ಗೆ ನಾನು ಪರಿಶೀಲನೆ ಮಾಡಿರಲಿಲ್ಲ. ಸದರಿ ಕಂಮಾಂಡ ಜೀಪು ಬಸವರಾಜನ ಸ್ವಂತದ್ದು ಇತ್ತು. ಸದರಿ ಕಂಮಾಂಡ ಜೀಪಿನಲ್ಲಿ ಒಟ್ಟು 10 ಜನರು ಇದ್ದೇವು. ನಾವು ಗಾಜರಕೋಟದಿಂದ ಯಾದಗಿರಿಗೆ ಬರುವಾಗ ಮುಂಡರಗಿ ಹತ್ತಿರ ರಸ್ತೆಯ ಕಾಮಗಾರಿ ನಡೆದಿತ್ತು. ಯಾದಗಿರಿಗೆ ಬರುವಾಗ ಜೀಪಿನ ಚಾಲಕನ ಎಡಬದಿಗೆ ಇರುವ ರಸ್ತೆಯ ಕಾಮಗಾರಿ ಆವಾಗ ನಡೆದಿತ್ತು. ರಸ್ತೆಯ ಕಾಮಗಾರಿ ನಡೆಯುತ್ತಿದ್ದಾಗ ಸಾಮಾನ್ಯವಾಗಿ ಯಾವುದೇ ಒಂದು ವಾಹನವು ನಿಧಾನವಾಗಿ ಚಲಿಸಬೇಕಾಗುತ್ತದೆ ಎಂದರೆ ಸರಿ. ರಾತ್ರಿಯ ಸಮಯದಲ್ಲಿ ವಾಹನಗಳು ದೀಪವನ್ನು ಹಾಕಿದ್ದಾಗ ಅವುಗಳಲ್ಲಿ ಯಾರು ಪ್ರಯಾಣಿಸುತ್ತಿದ್ದಾರೆ ಮತ್ತು ಅವುಗಳನ್ನು ಯಾರು ಚಲಾಯಿಸುತ್ತಿದ್ದರು ಎನ್ನುಬ ಗ್ಗೆ ಕಾಣುವುದಿಲ್ಲ ಎಂದರೆ ಸರಿಯಲ್ಲ. ಅದೇ ಪ್ರಕಾರ ಬೂದಿಯ ಟ್ಯಾಂಕರನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಅದೇ ದಿನ ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದರು. ನಾನು ಆಸ್ಪತ್ರೆಯಲ್ಲಿ ಪೊಲೀಸರ ಮುಂದೆ ಹೇಳಿಕೆಯನ್ನು ನೀಡುವಾಗ ಬೂದಿ ಟ್ಯಾಂಕರನ ಚಾಲಕನ ಹೆಸರು ಹೇಳಿರುವುದಿಲ್ಲ. ಪೊಲೀಸರು ಒಂದೇ ಬಾರಿಗೆ ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದರು. ರಾತ್ರಿ ಸಮಯದಲ್ಲಿ ಬೂದಿ ಟ್ಯಾಂಕರ್ ಚಾಲಕನು ಅದನ್ನು ಅತೀ ವೇಗವಾಗಿ ಚಲಾಯಿಸಿ ನಮ್ಮ ಜೀಪಿಗೆ ಡಿಕ್ಕಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ನಮ್ಮ ಜೀಪಿನ ಚಾಲಕನ ತಪ್ಪಿನಿಂದ ಆಗಿದ್ದರು ಸಹ ಅಪಘಾತ ಪರಿಹಾರವನ್ನು ಪಡೆಯುವ ಸಲುವಾಗಿ ಬೂದಿ ಟ್ಯಾಂಕರವು ವಿಮೆಗೆ ಒಳಪಟ್ಟಿರುವ ಕಾರಣ ಹಾಗೂ ಅದರ ಚಾಲಕನ್ನು ಚಾಲನಾ ಪರವಾನಿಗೆ ಪತ್ರ ಹೊಂದಿರುವ ಕಾರಣ ಈ ಸುಳ್ಳು ಪ್ರಕರಣವನ್ನು ಆತನ ವಿರುದ್ಧ ನೀಡಿರುತ್ತೇವೆ ಎಂದರೆ ಸರಿಯಲ್ಲ. ಆ

ದಿನ ಬೂದಿ ಟ್ಯಾಂಕರ್ ನು ಆನಂದಪ್ಪನು ಚಲಾಯಿಸಿರುವುದಿಲ್ಲ ಎಂದರೆ ಸಾಕ್ಷಿಯು ಆ ದಿನ ನಾನು ಆತನನ್ನು ನೋಡಿರುವುದಿಲ್ಲ ಹೇಗೆ ನಾನು ಹೇಳಲಿ ಎಂದು ಹೇಳುತ್ತಾರೆ. ಅಪಘಾತ ಪರಿಹಾರವನ್ನು ಪಡೆಯುವ ಸಲುವಾಗಿ ಆರೋಪಿತನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.